ಪಿ.ಡಬ್ಲ್ಯೂ - 1

**ದಿನಾಂಕ 16-01-2024 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ.ಎಸ್.ಸಿ.ಯು ವಕೀಲರಿಂದ ವಾದಿ ಪರವಾಗಿ**

ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರ ಸಲ್ಲಿಸಿದ್ದು, ಅದನ್ನು ತಯಾರಿಸಲು ಗೌರವಾನ್ವಿತ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯಗಳು ಸರಿಯಾಗಿರುತ್ತವೆ ಮತ್ತು ಸತ್ಯವಾಗಿರುತ್ತವೆ ಎಂದು ಈ ಮೂಲಕ ಪ್ರಮಾಣಿಸಿಕರಿಸುತ್ತೇನೆ.

ನನಗೆ ವಾದಿ ಬರೆದುಕೊಟ್ಟ ಒಟ್ಟು ಮೊಕ್ತಿಯಾರ ನಾಮೆಯನ್ನು ಹಾಜರಪಡಿಸಿದ್ದು ಅದನ್ನು ನಿಪಿ-1 ಎಂದು, ದಿಃ26.02.2010 ರ ಖರೀದಿ ಕರಾರು ಪತ್ರದ ಮೂಲ ಪ್ರತಿಯನ್ನು ಹಾಜರಪಡಿಸಿದ್ದೇನೆ (ಸದರಿ ದಾಖಲಾತಿ ನೋಂದಾಯಿತವಲ್ಲದ ಖರೀದಿ ಕರಾರು ಪತ್ರ ಆಗಿದ್ದು, ದಿಃ05.12.2022 ರ ಡೆಪ್ಯೂಟಿ ಕಮಿಷನರ್ ಆಪ್ ಸ್ಟಾಂಪ್ ಬಾಗಲಕೋಟರವರು ಕರ್ನಾಟಕ ಮುದ್ರಾಂಕ ಕಾಯ್ದೆ ಕಲಂ.41 ರ ಅಡಿ ಪ್ರಮಾಣ ಪತ್ರದ ಕಾರಣ ಸದರಿ ದಾಖಲಾತಿಯನ್ನು ನಿಶಾನೆ ಎಂದು ಗುರುತಿಸಲಾಯಿತು. ಸದರಿ ದಾಖಲಾತಿಯನ್ನು ನಿಪಿ-2 ಎಂದು ಗುರುತಿಸಲಾಯಿತು. ಸದರಿ ದಾಖಲಾತಿಯನ್ನು ಪ್ರತಿವಾದಿ ವಾದಿಗೆ ಬರೆದುಕೊಟ್ಟಿದ್ದು, ಅದಕ್ಕೆ ಸಾಕ್ಷಿದಾರರಾಗಿ ಮನ್ನಿಗೇರಿ, ಉಸ್ಮಾನ ಪೆಂಡಾರಿ, ಧರ್ಮಟ್ಟಿ ಹಾಗೂ ಮತ್ತೊಬ್ಬ ಧರ್ಮಟ್ಟಿರವರು ಸಹಿ ಮಾಡಿರುತ್ತಾರೆ. ಸದರಿ ದಾಖಲಾತಿಗೆ ಬಾಂಡ್ ರೈಟರರವರು ಸಹಿ ಮತ್ತು ಸೀಲ್ ಹಾಕಿರುತ್ತಾರೆ. ಸರ್ವೆ ನಂ.218 ರ 2022-23 ರ ಪಹಣಿ ಪತ್ರಿಕೆಯನ್ನು ಹಾಜರಪಡಿಸಿದ್ದು, ಅದನ್ನು ನಿಪಿ-3 ಎಂದು, ದಿಃ26.12.2022 ರಂದು ಪ್ರತಿವಾದಿಗೆ ವಕೀಲರ ಮೂಲಕ ಕಳುಹಿಸಿದ ನೋಟಿಸನ ಕಚೇರಿ ಪ್ರತಿ ಹಾಜರಪಡಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಪ್ರತಿವಾದಿಗೆ ಸದರಿ ನೋಟಿಸ್ ಕಳುಹಿಸಿದ ರಸೀದಿ ಹಾಜರಪಡಿಸಿದ್ದು ಅದನ್ನು ನಿಪಿ-5 ಎಂದು, ಪ್ರತಿವಾದಿಗೆ ಕಳುಹಿಸಿದ ಸದರಿ ನೋಟಿಸ್ ಅನಕ್ಲೇಮ್ಡ ಎಂದು ಹಿಂದಿರುಗಿ ಬಂದಿದ್ದು, ಸದರಿ ಲಕೋಟೆ ಹಾಜರಪಡಿಸಿದ್ದು, ಸದರಿ ಲಕೋಟೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ನಿಪಿ-6 ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ ಅದು ದಿಃ26.12.2022 ರ ನೋಟಿಸ್ ಆಗಿರುತ್ತದೆ, ಅದನ್ನು ನಿಪಿ-6 (ಎ) ಗುರುತಿಸಲಾಯಿತು.

**ಪಿ.ಡಬ್ಲ್ಯೂ - 1**

ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ